



## ಸುದ್ದಿವಾಹಿನಿಗಳ ಮಧ್ಯೆ ಕೋಳಿ ಜಗಳ?

**ತಾ**ನೊಬ್ಬನೇ, ತಾನೇ ಮೊದಲು, ತಾನೇ ಸರ್ವ ಶ್ರೇಷ್ಠ ಮತ್ತು ತನಗೇ ಹೆಚ್ಚು ವೀಕ್ಷಕರು ಎನ್ನುವ ನಿಟ್ಟಿನಲ್ಲಿ ಸುದ್ದಿ ವಾಹಿನಿಗಳ ಮಧ್ಯೆ ಹುಚ್ಚು ಸ್ಪರ್ಧೆ ಮತ್ತು ಶೀತಲ ಯುದ್ಧ ತೀರಾ ಸಾಮಾನ್ಯ. ವಾರ್ಷಿಕ ಬಜೆಟ್, ಚುನಾವಣಾ ಪೂರ್ವ ಸಮೀಕ್ಷೆ ಹಾಗೂ ಚುನಾವಣಾ ಫಲಿತಾಂಶದ ದಿನಗಳಲ್ಲಿ ತಮ್ಮ ವಾಹಿನಿಯ ವೀಕ್ಷಣಾ ರೇಟಿಂಗ್ ಅನ್ನು ವೈಭವೀಕರಿಸಿ ತನ್ಮೂಲಕ ತಮ್ಮ ಟಿಆರ್‌ಪಿಯನ್ನು ಮತ್ತು ಜಾಹೀರಾತು ಆದಾಯವನ್ನು ಹೆಚ್ಚಿಸಿಕೊಳ್ಳುವುದು ಲಾಗಾಯ್ತಿನಿಂದ ನಡೆದುಕೊಂಡು ಬಂದಿದೆ. ಇನ್ನೊಂದು ವಾಹಿನಿಯ ಟ್ಯಾಗ್ ಲೈನ್ ಅನ್ನು, ಅವರ ವೀಕ್ಷ ವೃಂದದ ಪ್ರಮಾಣವನ್ನು ಪರೋಕ್ಷವಾಗಿ ಟೀಕಿಸುವುದೂ ನಡೆಯುತ್ತದೆ.

ಗುಜರಾತ್ ಚುನಾವಣೆಯ ಫಲಿತಾಂಶದ ವೀಕ್ಷಣಾ ರೇಟಿಂಗ್ ಬಗ್ಗೆ ಎರಡು ಸುದ್ದಿ ವಾಹಿನಿಗಳು ನೇರವಾಗಿ ಅಖಾಡಕ್ಕೆ ಇಳಿದಿದ್ದು, ಸಂಬಂಧಪಟ್ಟ ನಿಯಂತ್ರಕರಿಗೆ ಪರಸ್ಪರ ದೂರು ಕೊಡುವವರೆಗೂ ಈ ಜಗಳ ಸಾಗಿದೆ. ಟೀವಿ ವೀಕ್ಷಕರಲ್ಲಿ ನಂಬರ್ ಒನ್ ಪಟ್ಟಕ್ಕೆ ನಡೆದಿರುವ ಈ ಸಂಘರ್ಷದ ಕೊನೆ ಹೇಗಾಗುವುದೆಂದು ತಿಳಿಯದು. ಈ ತಿಕ್ಕಾಟ ವೀಕ್ಷಕರಿಗೆ ಹೆಚ್ಚು ಸುದ್ದಿ ಕೊಡುವ, ಗುಣಮಟ್ಟದ ಸುದ್ದಿ ಕೊಡುವ ಮತ್ತು ರಿಪೀಟ್ ಕಾರ್ಯಕ್ರಮವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಅಗಿದ್ದರೆ ವೀಕ್ಷಕರು ನಿಟ್ಟುಸಿರು ಬಿಡುತ್ತಿದ್ದರೇನೋ? ಸುದ್ದಿ ವಾಹಿನಿಗಳ ವೃತ್ತಿ ಮಾತ್ಸರ್ಯ ಕಡಿಮೆಯಾಗಿ ವೃತ್ತಿಪರತೆ ಹೆಚ್ಚಲಿ ಎನ್ನುವುದೇ ವೀಕ್ಷಕರ ಆಶಯ.

—ರಮಾನಂದ ಶರ್ಮಾ, ಬೆಂಗಳೂರು

ವಾರದ ಪತ್ರ

## ಇಷ್ಟಕ್ಕೇ ಅಳುವೇಕೆ?

ಬಿಗ್ ಬಾಸ್ ಮನೆಯ ಸದಸ್ಯರ ಹಠದ ವರ್ತನೆ ಸರಿಯಲ್ಲ. ಮನೆಯವರ ಪತ್ರವನ್ನು ಬೆಂಕಿಗೆ ಹಾಕಿದಾಗ ಅವರಿಗಾದ ನೋವು, ಕೇವಲ ಕೆಲವು ದಿನಗಳು ಮನೆಯವರಿಂದ ದೂರ ಇದ್ದಿದ್ದಕ್ಕಾಗಿ ಅಳು, ಪ್ರೀತಿಗಾಗಿ ಕಣ್ಣೀರು.. ಇದೆಲ್ಲ ಅತಿಯಾಯಿತು. ಕೆಲವೇ ದಿನಗಳಲ್ಲಿ ತಮ್ಮವರನ್ನು ಸೇರುತ್ತಾರಲ್ಲವೇ!

ಆದರೆ ಅವರು ನಮ್ಮ ಸೈನಿಕರ ಬಗ್ಗೆ ಯೋಚಿಸಲಿ. ಹೋದವರು ಮತ್ತೆ ಮನೆಗೆ ಬರುತ್ತಾರೆಂಬುದನ್ನು ಮರತೇ ಬದುಕಬೇಕು. ವರ್ಷದಲ್ಲಿ ಒಮ್ಮೆಯೋ ಎರಡು ಬಾರಿಯೋ ಬರುವ ಮಗನಿಗಾಗಿ ಹೆತ್ತವರು, ಮಡದಿ , ಮಕ್ಕಳು ಚಾತಕಪಕ್ಷಿಯಂತೆ ಕಾಯುತ್ತಿರುತ್ತಾರೆ. ಉಗ್ರರ ಭಯದಿಂದ ಸೈನಿಕರು ಅಂಗೈಯಲ್ಲಿ ಜೀವ ಹಿಡಿದುಕೊಂಡು ಬದುಕುತ್ತಾರೆ. ಕೆಲವೊಂದು ಪ್ರದೇಶಗಳಲ್ಲಿ ಅವರಿಗೆ ಆಹಾರವೂ ತಲುಪುವುದಿಲ್ಲ. ತಿಂಗಳುಗಟ್ಟಲೇ ದೂರವಾಗಿ ಸಂಪರ್ಕ ಇರುವುದಿಲ್ಲ. ವಾರದಲ್ಲಿ ಊರಿಗೆ ಬರುತ್ತೇನೆಂದು ಹೇಳಿದವರು ಹೆಣವಾಗಿ ಬಂದಾಗ ಅವರ ಕುಟುಂಬದ ಪರಿಸ್ಥಿತಿ, ಭಾವನೆಗಳು ಹೇಗಿರಬೇಕು? ಬಿಗ್ ಬಾಸ್ ಮನೆಯವರು ಯೋಚಿಸಲಿ.

—ರತ್ನಾ ಅಶೋಕ ಗೊರವರ, ಧಾರವಾಡ

## ಇದೂ ಹಾಸ್ಯ!

**ಝೀ** ಕನ್ನಡ ವಾಹಿನಿಯಲ್ಲಿ ಮಾ. ಆನಂದ್‌ರವರ ನಿರ್ದೇಶನದಲ್ಲಿ ಪ್ರಸಾರವಾಗುತ್ತಿರುವ 'ನಿಗೂಢ ರಾತ್ರಿಗಳು' ಧಾರಾವಾಹಿಯಲ್ಲಿ, ಮಾಧವನಿಗೆ ಭುಜಕ್ಕೆ ಏಟು ಬಿದ್ದಿರುತ್ತದೆ. ಆಗ ಮನೆಗೆ ಡಾಕ್ಟರ್ ಪ್ರವೇಶವಾಗುತ್ತದೆ. ಡಾಕ್ಟರ್ ಬಂದವನೇ ಗಾಯವಾದ ಭುಜಕ್ಕೆ ಏನಾಯಿತು ಎಂದು ಕೇಳುತ್ತಾನೆ. ಅಲ್ಲದೆ ಗಾಯವನ್ನೇ ನೋಡದೆ ಬ್ಯಾಂಡೇಜ್ ಸುತ್ತುತ್ತಾನೆ. ನಂತರ ರೋಗಿಯ ಕೈಯನ್ನೇ ನೋಡದೆ ನನಗೆ ಭಯ ಎನ್ನುತ್ತಾ ವಿರುದ್ಧ ದಿಕ್ಕಿಗೆ ತಿರುಗಿ ಇಂಜೆಕ್ಷನ್ ಕೊಡುತ್ತಾನೆ. ಕನಿಷ್ಠ ಎಲ್ಲಿಗೆ ಕೊಡುತ್ತಿದ್ದೇನೆ ಎಂಬುದನ್ನೂ ನೋಡುವುದಿಲ್ಲ. ನಂತರ ಮನೆಯವರು ಹಣ ಕೊಟ್ಟಾಗ ಇಷ್ಟೇನ ಅನ್ನುತ್ತಾನೆ. ಇವನೊಬ್ಬ ಡಾಕ್ಟರ್. ಇದೂ ಒಂದು ಹಾಸ್ಯ.!

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಕಣ್ಮಣಿಗಳ ನೆನಪಿನಂಗಳ

ಚಂದನದ 'ಶುಭೋದಯ ಕರ್ನಾಟಕ' ಎಂಬ ವಿನೂತನ ಕಾರ್ಯಕ್ರಮದ ಭಾಗವಾಗಿ ಕನ್ನಡ ಕಣ್ಮಣಿಗಳ ನೆನಪಿನಂಗಳದಲ್ಲಿ ಕಾರ್ಯಕ್ರಮ ಪ್ರಸಾರವಾಗುತ್ತಿದೆ. ಚರಿತ್ರೆಯನ್ನು ನೆನಪಿಸುವ ಸುಂದರ ಕಾರ್ಯಕ್ರಮ. ನೆನಪಿನಂಗಳದಲ್ಲಿ ಯಕ್ಷಗಾನ ವಿದ್ವಾಂಸರಾದ ಶಂಭು ಹೆಗಡೆ ಅವರ ಸಂದರ್ಶನದ ಬಿಡಿ ಭಾಗ, ಜ್ಞಾನಪೀಠ ಪ್ರಶಸ್ತಿ ಪಡೆದ ವರಕವಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಇವರನ್ನು ಪರಿಚಯಿಸುವ ವಿಡಿಯೋ ತುಣುಕು, ಕಡಲ ಭಾರ್ಗವರೆಂದು ಪ್ರಸಿದ್ಧರಾದ ಮತ್ತು ಜ್ಞಾನಪೀಠ ಪ್ರಶಸ್ತಿಗೆ ಭಾಜನರಾದ ಕೆ. ಶಿವರಾಮ ಕಾರಂತರ ಜೊತೆ ನಡೆಸಿದ ಸಂದರ್ಶನದ ತುಣುಕುಗಳು ಪ್ರೇಕ್ಷಕರ ಗಮನ ಸೆಳೆದವು. ಇದು ಕನ್ನಡ ಸಾಹಿತ್ಯ ಲೋಕದ ದಿಗ್ಗಜರ ಚರಿತ್ರೆಯನ್ನು ಇಂದಿನ ಯುವಜನರಿಗೆ ಮತ್ತು ಸಾಹಿತ್ಯಾಭಿಮಾನಿಗಳಿಗೆ ಪರಿಚಯಿಸುವ ಸುಂದರ ಪ್ರಯೋಗವೆಂದೇ ಹೇಳಬಹುದಾಗಿದೆ. ಇಂತಹ ಕಾರ್ಯಕ್ರಮಗಳು ನಾಡು– ನುಡಿಗಳನ್ನು ಉಳಿಸಿ ಬೆಳೆಸುವಲ್ಲಿ ಸಹಕಾರಿ.

ಶುಭೋದಯ ಕಾರ್ಯಕ್ರಮವು ಅದ್ಭುತವಾಗಿ ಮೂಡಿಬರುತ್ತಿದೆ. ಕರುನಾಡಿನ ಕಲೆ, ಸಾಹಿತ್ಯ, ವ್ಯಕ್ತಿಗಳ ಪರಿಚಯ, ರಂಗಭೂಮಿ, ಚರಿತ್ರೆಯ ಸಮಗ್ರ ಪರಿಕಲ್ಪನೆಯ ರಸದೌತಣ ಇದಾಗಿದೆ.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ,<br>
ಮೈ.ಸತೀಶಕುಮಾರ, ಬಂಗಾರ ಪೇಟೆ

## ಅಪಾಯಕಾರಿ ಆಟ

ಬಿಗ್ ಬಾಸ್ ಕಾರ್ಯಕ್ರಮ ಕೆಲವರ ಪ್ರಕಾರ, ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿಯಾಗುತ್ತದಂತೆ. ಆದರೆ ಟಾಸ್ಕ್ ಗೆಲ್ಲುವ ಹುಮ್ಮಸ್ಸಿನಲ್ಲಿ ಅವರ ಅಹಂ, ಇತರರನ್ನು ತುಳಿದು ಮುಂದೆ ಬರಬೇಕೆನ್ನುವ ಸ್ವಭಾವ, ಅತಿಯಾಸೆ, ಸಿಟ್ಟು ಇತ್ಯಾದಿಗಳನ್ನು ಹೆಚ್ಚಿಸುತ್ತದಲ್ಲವೆ? ಜೊತೆಗೆ ಫಿಸಿಕಲ್ ಟಾಸ್ಕ್‌ಗಳಲ್ಲಿ ಸಣ್ಣಪುಟ್ಟ ಗಾಯಗಳೂ ಆಗುತ್ತವೆ. ಇತ್ತೀಚಿನ ಟಾಸ್ಕ್ ಒಂದರಲ್ಲಿ ಕತ್ತರಿ ಕೂಡ ಹಿಡಿದುಕೊಂಡು ಅನೇಕರು ಗಾಯ ಮಾಡಿಕೊಂಡರು. ದಯವಿಟ್ಟು ಇಂತಹ ಅಪಾಯಕಾರಿ ಆಟಗಳನ್ನು ಆಡಿಸಬೇಡಿ.

– ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

## ಮುದ ನೀಡುವ ಪುರಂದರ ದರ್ಶನ

ಪ್ರತಿ ಸೋಮವಾರದಿಂದ ಶುಕ್ರವಾರದವರೆಗೆ ರಾತ್ರಿ 8 ಗಂಟೆಯಿಂದ ಅರ್ಧ ತಾಸು 'ಚಂದನ' ವಾಹಿನಿಯಲ್ಲಿ 'ಪುರಂದರ ದರ್ಶನ' ಎಂಬ ಪುರಂದರ ದಾಸರ ಕುರಿತ ಸಂಗೀತ ಕಾರ್ಯಕ್ರಮ ಪ್ರಸಾರವಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವ ನಿರೂಪಕ ಶರತ್‌ರಿಂದ ಹಿಡಿದು, ಸಂಗೀತದ ಸುಧೆ ಹರಿಸುತ್ತಿರುವ 'ದಿಗ್ಗಜ'ರಾಗಿರುವ ಶ್ರೀಮತಿ ವಾಸವಿ ಸತೀಶ್, ಶ್ರೀ ವಿದ್ಯಾಭೂಷಣ ಇಂತಹವರ ಭಾಗವಹಿಸುವಿಕೆಯಿಂದಾಗಿ ಈ ಕಾರ್ಯಕ್ರಮ ಅದ್ಭುತವಾಗಿ ಮೂಡಿಬರುತ್ತಿದೆ, ಮುದನೀಡುತ್ತಿದೆ.

—ನಾರಾಯಣ ಯಾಜಿ, ಶಿರಾಲಿ

## ಪುಟ್ಟ ಮಕ್ಕಳ ಸವಿ ಗಾನ

ಝೀ ಕನ್ನಡ ವಾಹಿನಿಯಲ್ಲಿ ಪುನರಾರಂಭವಾಗಿರುವ ಸ ರಿ ಗ ಮ ಪ ಲಿಟಲ್ ಚಾಂಪ್ಸ್ ಕಾರ್ಯಕ್ರಮದಲ್ಲಿ ಪುಟ್ಟ ಪುಟ್ಟ ಮಕ್ಕಳ ಕಂಠಸಿರಿಯಲ್ಲಿ ಗಾನ ಕೇಳಲು ಮುದವೆನಿಸುತ್ತದೆ. ಬೆಳಗಾವಿಯ ರೈತಾಪಿ ಕುಟುಂಬದ ಕಂಚಿನ ಕಂಠದ ಲಕ್ಷ್ಮಿ ಹಾಡಿದ ಜಾನಪದ ಗೀತೆಯನ್ನು ತೀರ್ಪುಗಾರರು, ವೀಕ್ಷಕರು ಮೆಚ್ಚಿಕೊಂಡಿದ್ದಾರೆ. ಏಕತಾನತೆಯ ಧಾರಾವಾಹಿಗಳನ್ನು ನೋಡಿ ನೋಡಿ ಬೇಸತ್ತಿದ್ದ ನಮಗೆ ಮರಳುಗಾಡಿನಲ್ಲಿ ನೀರು ದೊರೆತ ಸುಖಾನುಭವವಾಗಿದೆ.

—ಮಧುರ ಸುಬ್ರಹ್ಮಣ್ಯ, ಬೆಂಗಳೂರು